ಸಾಕ್ಷಿಯನ್ನು ಕರೆಯಿಸಿ. ಪ್ರಮಾಣ ವಚನ ಬೋಧಿಸಿತು. ದಿನಾಂಕಃ **07.03.2017**

ಪಾಟೀಸವಾಲುಃ ಎಸ್‌ಜಿ ವಕೀಲರಿಂದ

ಈಗ ತೋರಿಸಿದ ಪೋಟೋದಲ್ಲಿ ಕಾಣುತ್ತಿರುವ ಮಂಗಳೂರು ಹೆಂಚಿನ ಸೂರು ಇರುವ ಮನೆಯೇ ದಾವಾ ಬಿ ಸ್ವತ್ತು ಎಂದರೆ ಸರಿ. ಫೋಟೋವನ್ನು ನಿಡಿಃ 1 ಎಂದು ಗುರುತಿಸಿತು. ಈಗ ತೋರಿಸಿದ ಇನ್ನೊಂದು ಪೋಟೋದಲ್ಲಿ ಕಾಣುತ್ತಿರುವ ಖಾಲಿ ಜಾಗಕ್ಕೆ ನಾವು ತೊಂದರೆ ಕೊಟ್ಟಾಗ ಪ್ರತಿವಾದಿ ಇನ್ನೊಂದು ದಾವೆ ಹಾಕಿದ್ದರು ಎಂದರೆ ಸರಿ. ಆ ಪೋಟೋವನ್ನು ನಿಡಿಃ 2 ಎಂದು ಗುರುತಿಸಿತು. ಚಿಕ್ಕಮ್ಮನ ಮನೆಯ ಪೂರ್ವಕ್ಕೆ ಇರುವ ಜಾಗವೇ ತಿರುಗಾಡುವ ಜಾಗ ಮತ್ತು ಆ ಜಾಗದ ಮೂಲಕವೇ ನಾನು ನನ್ನ ಜಮೀನಿಗೆ ಓಡಾಡುತ್ತೇನೆ ಎಂದು ಇನ್ನೊಂದು ಪೋಟೋ ತೋರಿಸಿದರೆ ಸಾಕ್ಷಿ ಸರಿ ಎಂದಿದ್ದರಿಂದ ನಿಡೀ 3 ಎಂದು ಗುರುತಿಸಿತು. ನಿಪಿಃ 11 ಅಸೆಸ್‌ಮೆಂಟ್ ದಾಖಲೆಯಲ್ಲಿ ಬಸವೇಗೌಡ ಬಿನ್ ಬಸವೇಗೌಡ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಸರಿ ಎಂದು ಹೇಳಿ ಉತ್ತರ ಬೆರಳಚ್ಚುಪಡಿಸುತ್ತಿರುವಾಗಲೇ ಸರಿಯಲ್ಲವೆಂದು ಉತ್ತರಿಸಿದ್ದಾರೆ. ಸಾಕ್ಷಿಗೆ ನಿಪಿಃ 11 ರಲ್ಲಿ ಅಸೆಸ್‌ಮೆಂಟ್ ತಪ್ಪಾಗಿ ಇದೆ ಎಂದು ಹೇಳುತ್ತಿದ್ದೀರಿ ಹಾಗಾದರೆ ನಿಪಿಃ 12 ರಲ್ಲಿರುವ ಜಂಜರ್ ನಂಃ 33 ಆಸ್ತಿ ನಂಬರ್ 31 ರ ಅಸೆಸ್‌ಮೆಂಟ್ ಬಗ್ಗೆ ಅಪೀಲು ಯಾಕೆ ಹಾಕಿಲ್ಲ ಎಂದು ಕೇಳಿದರೆ ಅಪೀಲು ಹಾಕಿದ್ದೇನೆ ಎನ್ನುತ್ತಾರೆ. ಸದರಿ ಅಪೀಲು ಯಾರ ಪರವಾಗಿ ತೀರ್ಮಾನವಾಗಿದೆ ಎಂದರೆ ಸಾಕ್ಷಿಗೆ ಉತ್ತರಿಸಲು ಸಾಧ್ಯವಾಗಿಲ್ಲ. ಆಸ್ತಿ ನಂಃ 31 ಮತ್ತು ಜಂಜರ್ ನಂಃ 33 ರ ಅಸೆಸ್‌ಮೆಂಟ್ ದಾಖಲೆ ಹಾಜರುಮಾಡಿ ದಾವಾ ಸ್ವತ್ತು ನಮ್ಮದು ಎಂದು ಮಾಲೀಕತ್ವ ಘೋಷಣೆ ಪಡೆಯಲು ಏನು ತೊಂದರೆ ಇದೆ ಎಂದರೆ ಸಾಕ್ಷಿ ಉತ್ತರಿಸಿಲ್ಲ.

ಜಂಜರ್ ನಂಬರ್ 33 ಆಸ್ತಿ ನಂಃ 31 ರಲ್ಲಿ ಚಿಕ್ಕಮ್ಮ ಮತ್ತು ಬಸವರಾಜು ಮನೆಕಟ್ಟಿಕೊಂಡು ವಾಸಮಾಡುತ್ತಿದ್ದಾರೆ ಎಂದರೆ ಮೊದಲು ಕಟ್ಟಿರಲಿಲ್ಲ ಈಗ ಕಟ್ಟಿಕೊಂಡಿದ್ದಾರೆ. ಜಂಜರ್ ನಂಃ 33 ಅಸ್ತಿ ನಂಬರ್ಃ 31 ಇಸವಿ 1980 ರಲ್ಲೇ ಅಸೆಸ್‌ಮೆಂಟ್ ಅಗಿತ್ತು ಎಂದರೆ ಸರಿಯಲ್ಲ. 1980 ರಲ್ಲೇ ಬಸವೇಗೌಡ ಬಿನ್ ಬಸವೇಗೌಡ ಸದರಿ ಆಸ್ತಿಯಲ್ಲಿ 9 ಅಂಕಣದ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಚಿಕ್ಕಮ್ಮ ಮತ್ತು ಬಸವರಾಜು ಸದರಿ ಆಸ್ತಿಯಲ್ಲಿ ವಾಸಮಾಡದೇ ಇದ್ದಲ್ಲಿ ಅವರು ಎಲ್ಲಿ ವಾಸಮಾಡುತ್ತಿದ್ದಾರೆ ಎಂಬ ಬಗ್ಗೆ ದಾಖಲೆಗಳನ್ನು ಹಾಜರುಮಾಡಿದ್ದೀನಾ ಎಂದರೆ ಮಾಡಿದ್ದೇನೆ.

ನಾನು ದಾಖಲೆ ಹಾಜರುಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ 15 ನ್ನು ನನ್ನ ತಂದೆಗೆ ನೀಡಲಾಗಿತ್ತು ಎಂದರೆ ಸರಿ. ನಿಪಿಃ 15 ರಲ್ಲಿ ಸದರಿ ದಿನಾಂಕದಂದು ಅಳತೆಗೆ ಬಂದಾಗ ಎದುರುದಾರರು ತಕರಾರು ಮಾಡಿದ್ದರಿಂದ ಅಳತೆ ಮಾಡಿಲ್ಲವೆಂದು ನಮೂದಾಗಿದೆ ಎಂದರೆ ಅಳತೆ ಮಾಡಿದ್ದಾರೆ. ಆದಿನ ಅಳತೆಗೆ ಬಂದಾಗ ಗಲಾಟೆಯಾಗಿದ್ದರಿಂದ ಪೊಲೀಸರು ಬಂದು ಇನ್ನೊಂದು ದಿನ ಅಳತೆ ಮಾಡುವಂತೆ ಹೇಳಿ ಕಳುಹಿಸಿದ್ದರು ಎಂದರೆ ಸರಿ. ಇನ್ನೊಂದು ಬಾರಿ ಅಳತೆಗೆ ಬಂದಾಗ ಬರುವ ಮುಂಚೆ ಕೊಟ್ಟ ನೊಟೀಸ್‌ನ್ನು ಹಾಜರುಮಾಡಿದ್ದೀನಾ ಎಂದರೆ ಮಾಡಿದ್ದೇನೆ. ನಾನು ತಾಲ್ಲೂಕು ಕಛೇರಿಯಲ್ಲಿ ನನ್ನ ಪ್ರಭಾವ ಬಳಸಿ ಸುಳ್ಳು ಸ್ಕೆಚ್ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನದೆಂದು ಹೇಳುತ್ತಿರುವ ಆಸ್ತಿಯಲ್ಲಿ ಈಗ ಬಸವರಾಜು ಮತ್ತು ಚಿಕ್ಕಮ್ಮ ವಾಸಮಾಡುತ್ತಿದ್ದಾರೆ ಎಂದರೆ ಸರಿ. ಆ ಜಾಗವು ಅವರಿಗೇ ಸೇರಿದ ಆಸ್ತಿ ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ದಾವಾ ಬಿ ಸ್ವತ್ತು ಅಸೆಸ್‌ಮೆಂಟ್ ಆಸ್ತಿಯಾಗಿದ್ದರೂ ಅದು ಸರ್ವೆ ನಂಬರ್ ಜಾಗವೆಂದು ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಬಿ ಸ್ವತ್ತಿನ 3 ಗುಂಟೆ ಬಗ್ಗೆ ನನ್ನ ಬಳಿ ಪ್ರತ್ಯೇಕ ಕ್ರಯಪತ್ರ ಇದೆಯೇ ಎಂದರೆ ಸಾಕ್ಷಿಯು ಆ ಪತ್ರವನ್ನು ಹಾಜರುಮಾಡುತ್ತೇನೆ ಎನ್ನುತ್ತಾರೆ.

ನನ್ನ ಜಮೀನು 1 ಎಕರೆ 25 ಗುಂಟೆಯ ಪೂರ್ವಕ್ಕೆ ದಾರಿ ಇದೆ ಎಂದರೆ ಸರಿ. ಆ ದಾರಿಯಿಂದ ಪೂರ್ವಕ್ಕೆ ನನ್ನ ಜಮೀನಿಗೆ ಹೊಂದಿಕೊಂಡಂತೆ ಲಿಂಗಯ್ಯನ ಜಮೀನು ಇದೆ ಎಂದರೆ ಸರಿ. ನಾನು ನನ್ನ ಆಸ್ತಿ ಎಲ್ಲಿ ಇರುತ್ತದೆ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳದೆ ಮತ್ತು ನಿಂಗಯ್ಯನನ್ನು ಪಕ್ಷಕಾರನನ್ನಾಗಿ ಮಾಡದೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಕ್ರಯ ಮಾಡಿದ ವ್ಯಕ್ತಿಗೆ ನನ್ನ ಪರವಾಗಿ 1 ಎಕರೆ 28 ಗುಂಟೆ ಕ್ರಯಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸಾ ಸ ಇ ಎ ಒ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಯಳಂದೂರು.